# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

ಜ್ಞಾನ ಸಾಗರ ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ-583 105

**ಕುಲಸಚಿವರು** **ದೂರವಾಣಿ: 08392-242873/ಫ್ಯಾಕ್ಸ್: 08392- 242097**


ಸಂಖ್ಯೆ:ವಿಶ್ರೀಕೃವಿಬ/ಆಡಳಿತ/2016-17/44 ದಿನಾಂಕ: 11.04.2017

## ಸುತ್ತೋಲೆ:

ಈ ಮೂಲಕ ಎಲ್ಲಾ ಸಂಯೋಜಿತ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ತಿಳಿಯಪಡಿಸುವುದೇನೆಂದರೆ, ತಮ್ಮ ತಮ್ಮ ಮಹಾವಿದ್ಯಾಲಯಗಳಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಅಧ್ಯಯನ ಮಾಡುತ್ತಿರುವ ಪ.ಜಾತಿ/ಪ.ಪಂ, ಹಿಂದುಳಿದ ಹಾಗೂ ಅಲ್ಪ ಸಂಖ್ಯಾತ ವರ್ಗಗಳಾದ ಪ್ರವರ್ಗ-01/2ಎ/2ಬಿ/3ಎ/3ಬಿ ವಿದ್ಯಾರ್ಥಿಗಳಿಗೆ ಪ್ರವೇಶ ಪಡೆಯುವಾಗ ಶುಲ್ಕ ವಿನಾಯಿತಿ ನೀಡಿ ಪ್ರವೇಶ ನೀಡಲಾಗಿದೆ. ತದ ನಂತರ ಶುಲ್ಕ ವಿನಾಯಿತಿ ಹಣವನ್ನು ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಗಳಿಂದ ಕ್ಲೇಮ್ ಮಾಡಿ ವಿನಾಯಿತಿ ಶುಲ್ಕವನ್ನು ಭರಿಸಿಕೊಂಡಿರಬಹುದು. ಆಯಾ ವಿದ್ಯಾರ್ಥಿಗಳು ಪ್ರವೇಶಾತಿ ಸಮಯದಲ್ಲಿ ತುಂಬಿದ ಹಣವನ್ನು ಅವರಿಗೆ ಮರು ಪಾವತಿಸಬೇಕಾಗುತ್ತದೆ. ಈ ಬಗ್ಗೆ ಹಲವಾರು ವಿದ್ಯಾರ್ಥಿಗಳಿಂದ ದೂರುಗಳು ವಿಶ್ವವಿದ್ಯಾಲಯಕ್ಕೆ ಬಂದಿದ್ದು, ಸದರಿ ವಿಷಯ ಸೂಕ್ಷ್ಮವಾಗಿರುವುದರಿಂದ ವಿಶ್ವವಿದ್ಯಾಲಯವು ಗಂಭೀರವಾಗಿ ಪರಿಗಣಿಸಿದೆ. ಕಾರಣ ಮಹಾವಿದ್ಯಾಲಯಗಳ ಪ್ರಾಚಾರ್ಯರು ತಮ್ಮ ಮಹಾವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಶುಲ್ಕ ವಿನಾಯಿತಿ ಮೊತ್ತವನ್ನು ವಿಶ್ವವಿದ್ಯಾಲಯಕ್ಕೆ ಕಳುಹಿಸಿದ ಬಗ್ಗೆ ಹಾಗೂ ವಿದ್ಯಾರ್ಥಿಗಳಿಗೆ ಪಾವತಿಸಿದ ಬಗ್ಗೆ ವಿವರವಾದ ಮಾಹಿತಿಯನ್ನು ದಿನಾಂಕ: 30.04.2017ರ ಒಳಗೆ ಸಲ್ಲಿಸಲು ಸೂಚಿಸಿದೆ. ಮಾಹಿತಿ ಕಳುಹಿಸುವುದನ್ನು ವಿಳಂಬ ಮಾಡಿದಲ್ಲಿ ಅಥವಾ ಕಳುಹಿಸದೇ ಇದ್ದಲ್ಲಿ ವಿಶೇಷ ಸಮಿತಿ ರಚಿಸಿ ವಿದ್ಯಾರ್ಥಿಗಳಿಗೆ ಆದ ಅನ್ಯಾಯವನ್ನು ಪರಿಶೀಲಿಸಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗುತ್ತದೆ. ಈ ವಿಷಯವನ್ನು ಅತೀ ಜರೂರು ಎಂದು ಭಾವಿಸಿ ಮಾಹಿತಿಯನ್ನು ಕೊಡುವಂತೆ ತಿಳಿಸಲು ಮಾನ್ಯ ಕುಲಪತಿಗಳಿಂದ ನಿರ್ದೇಶಿತನಾಗಿದ್ದೇನೆ.

**ಈ ಕೆಳಕಂಡ ನಮೂನೆಯಲ್ಲಿ ವಿವರವನ್ನು ಭರ್ತಿ ಮಾಡುವುದು:**

| ಕ್ರ.ಸಂ | ವಿದ್ಯಾರ್ಥಿಯ ಹೆಸರು | ಜಾತಿವಾರು ವಿವರ | ಸರ್ಕಾರದಿಂದ ಮಂಜೂರಾದ ಹಣ | ವಿದ್ಯಾರ್ಥಿಗಳಿಗೆ ಪಾವತಿಸಿದ ಹಣ | ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಶುಲ್ಕ ವಿನಾಯಿತಿ ಹಣ | 2015-16 | 2016-17 |
|---|---|---|---|---|---|---|---|
| | | | | | | | |

**ಕುಲಸಚಿವರು**
11/4/2017
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ.

**ಪ್ರತಿಗಳು:**

1. ಮಾನ್ಯಕುಲಪತಿಗಳ ಆಪ್ತ-ಕಾರ್ಯದರ್ಶಿ, ವಿಶ್ರೀಕೃವಿವಿ, ಬಳ್ಳಾರಿ.
2. ಕುಲಸಚಿವರು(ಮೌಲ್ಯಮಾಪನ), ವಿಶ್ರೀಕೃವಿವಿ, ಬಳ್ಳಾರಿ.
3. ಎಲ್ಲಾ ಸಂಯೋಜಿತ ಸ್ನಾತಕ ಹಾಗೂ ಸ್ನಾತಕೋತ್ತರ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ,
4. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿವಿ, ಬಳ್ಳಾರಿ,
5. ಕಛೇರಿ ಪ್ರತಿ.